ಒ ಎಸ್ 57/2016 ಪಿ.ಡಬ್ಲ್ಯೂ 1

ಇಂದು ದಿಃ 19.08.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಇ ಎಂ ಕೆ ವಕೀಲರಿಂದಃ

ನನ್ನ ತಂದೆಯ ಅಣ್ಣ ತಮ್ಮಂದಿರು ಒಟ್ಟು 9 ಜನರು. 9 ಜನರ ಹೆಸರಿನಲ್ಲಿಯೂ ಖಾತೆ ಆಗಿದೆಯೇ ಎಂದರೆ ಇಲ್ಲ ಎನ್ನುತ್ತಾರೆ. ಮುದ್ದುಮಾದಯ್ಯ ನನ್ನ ದೊಡ್ಡಪ್ಪನ ಮಗ. ನನ್ನ ದೊಡ್ಡಪ್ಪನ ಹೆಸರು ದೇವರಗುಡ್ಡ ಮಾದಯ್ಯ. ಅವರು ಕೆಲ್ಲಯ್ಯನ ಮೊದಲ ಹೆಂಡತಿ ಮಗ. ದೇವರಗುಡ್ಡ ಮಾದಯ್ಯ ಆಸ್ತಿಯನ್ನು ಕೆಲ್ಲಯ್ಯನಿಂದ ವಿಭಾಗ ಮಾಡಿ ಪಡೆದುಕೊಂಡಿದ್ದರು ಎಂದರೆ ಸರಿ. ಸರ್ವೆ ನಂ.21 ಅನ್ನು ಮುದ್ದುಮಾದಯ್ಯರವರು ಕೃಷ್ಣಮೂರ್ತಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮುದ್ದುಮಾದಯ್ಯರವರ ಜಮೀನು ಸರ್ವೆ ನಂ. 21ರ ಆಜುಬಾಜಿನಲ್ಲಿದೆ ಎಂದರೆ ಸರಿ.

ಸರ್ವೆ ನಂ. 23 ದಾವಾ ಐಟಂ 1 ರ ಸರ್ವೆ ನಂ. 23/2ರ ಹಳೆಯ ಆರ್ ಟಿ ಸಿ ಯನ್ನು ನಾನು ನೊಡಿಲ್ಲ. ಕೆಲ್ಲಯ್ಯ ಆ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡಿದ್ದರು. ಸರ್ವೆ ನಂ. 23/2 ಅನ್ನು ಕೆಲ್ಲಯ್ಯರವರು ಅವರ 4 ಜನ ಮಕ್ಕಳಿಗೂ ಭಾಗ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ರೀತಿ ಬಾಗ ಮಾಡಿದ ನಂತರ 4 ಜನರ ಹೆಸರಿನಲ್ಲಿ 1975ರಲ್ಲಿ ಖಾತೆ ಸಹ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ಅವರು ವ್ಯವಸಾಯ ಮಾಡುತ್ತಿದ್ದುದ್ದನ್ನು ಸಹ ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. 1ನೇ ಐಟಂ ಆಸ್ತಿಯಲ್ಲಿ 12ನೇ ಪ್ರತಿವಾದಿ ಗಂಡ ಚಿಕ್ಕ ಮಾದಯ್ಯನಿಗೆ ಮದ್ಯ ಭಾಗದಲ್ಲಿ 30 ಗುಂಟೆ ಜಮೀನು ಬಂದಿದೆ ಎಂದರೆ ಸರಿಯಲ್ಲ.

ದಾವಾ 2ನೇ ಐಟಂ ಸ್ವತ್ತಿನ ಆರ್ ಟಿ ಸಿ ಯನ್ನು ತೆಗೆದು ನೋಡಿಲ್ಲ. ಕೆಲ್ಲಯ್ಯ ಜೀವಂತ ಇರುವಾಗಲೇ 2ನೇ ಐಟಂ ಆಸ್ತಿಯನ್ನು ನನ್ನ ತಂದೆ ಮತ್ತು ಸಹೋದರಿಗೆ ಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು 10ನೇ ತರಗತಿ ಓದಿದ್ದೇನೆ. ದಾಖಲೆಗಳನ್ನು ಬೇಗ ಕೊಡಲಿಲ್ಲ ಆ ಕಾರಣ ನಾನು ಅವುಗಳನ್ನು ಪರಿಶೀಲಿಸಿಲ್ಲ. 2ನೇ ಐಟಂ ಆಸ್ತಿಯಲ್ಲಿ ಸಹ 36 ½ ಗುಂಟೆ ಜಮೀನನ್ನು ಚಿಕ್ಕ ಮಾದಯ್ಯನಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗೆ ಕಂದಾಯ ಕಟ್ಟಿದ ದಾಖಲೆಗಳು ಇಲ್ಲ. ದಾವಾ ಆಸ್ತಿಗಳಿಗೆ ಕಂದಾಯ ಕಟ್ಟಬೇಕು ಎಂಬ ತಿಳುವಳಿಕೆ ಇತ್ತು ಆದರೆ ವಿಭಾಗ ಆದಾಗ ಕಟ್ಟೋಣ ಎಂದು ಇದ್ದೆ ಎನ್ನುತ್ತಾರೆ. ಪ್ರತಿವಾದಿ 28 ರಿಂದ 41ರವರೆಗೆ ಯಾರೂ ಸಹ ನನ್ನ ಜೊತೆ ವಿಶ್ವಾಸದಲ್ಲಿ ಇಲ್ಲ. ನಾನೇ ಅವರನ್ನು ಪ್ರೇರೇಪಿಸಿ ಅರ್ಜಿ ಸಲ್ಲಿಸಿ ದಾವೆಯಲ್ಲಿ ಸೇರ್ಪಡೆ ಮಾಡಿದ್ದೇನೆ ಎಂದರೆ ಸರಿಯಲ್ಲ.

5ನೇ ಐಟಂ ಆಸ್ತಿ ಸರ್ವೆ ನಂ. 154/1 ಆಸ್ತಿ ನನಗೆ ಗೊತ್ತು. ಅದರಲ್ಲಿಯೂ ಸಹ ಚಿಕ್ಕಮಾದಯ್ಯನಿಗೆ 28 ½ ಗುಂಟೆ ಜಮೀನು ಕೊಟ್ಟಿದ್ದಾರೆ ಎಂದರೆ ಅವರು ಅನುಭೋಗದಲ್ಲಿ ಇದ್ದಾರೆ ಎನ್ನುತ್ತಾರೆ. ಚಿಕ್ಕಮಾದಯ್ಯನವರು ಐಟುಂ 1 ಮತ್ತು 2 ರ ಆಸ್ತಿಯನ್ನು ವ್ಯವಸಾಯ ಮಾಡುತ್ತಿದ್ದಾರೆ. ಸರ್ವೆ ನಂ. 23 ಮತ್ತು 24 ರಲ್ಲಿ ವ್ಯವಸಾಯ ಮಾಡುತ್ತಿದ್ದೇನೆ. ಉಳಿಕೆ ಜಮೀನನ್ನು ಯಾರೂ ಉಳುಮೆ ಮಾಡುತ್ತಿಲ್ಲ, ಪಾಳು ಜಮೀನಾಗಿದೆ. ದಾವಾ ಆಸ್ತಿಯ ಚೆಕ್ಕುಬಂಧಿಯನ್ನು ನಾನೇ ಹೇಳಿ ಬರೆಸಿದ್ದೆ. ಐಟಂ ಸಂಖ್ಯೆ 7 ಮತ್ತು 8ರ ಆಸ್ತಿ ಬಹಳ ವರ್ಷ ಆದ ಕಾರಣ ಚೆಕ್ಕುಬಂಧಿ ಹೇಳಲು ಆಗುವುದಿಲ್ಲ. ಐಟಂ ಸಂಖ್ಯೆ 7 ಮತ್ತು 8ರ ಬಾಜುವಿನಲ್ಲಿ ಮಹದೇವರ ಜಮೀನು ಅಂದರೆ ಸರ್ವೆ ನಂ. 238/1ಎ ಮತ್ತು 238/1ಬಿ ಇದೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.